# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 252 |
| ಸದಸ್ಯರ ಹೆಸರು | : ಡಾ: ಆರತಿ ಕೃಷ್ಣ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : 28.01.2026 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ವೇದ ವಿಜ್ಞಾನ ಮಹಾಪೀಠ (Art of Living) ಕ್ಕೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕೆಂಗೇರಿ ಹೋಬಳಿ, ಅಗರ ಹಾಗೂ ಕಗ್ಗಿಲಿಪುರ ಗ್ರಾಮಗಳಲ್ಲಿ ಲೀಸ್ ಆಧಾರದ ಮೇಲೆ ಒದಗಿಸಲಾದ ಸರ್ಕಾರಿ ಜಮೀನುಗಳ ಕಾಲಾವಧಿ ಮುಕ್ತಾಯವಾಗಿದ್ದರೂ ಸಹ, ಪ್ರಸ್ತಾಪಿತ ಜಮೀನುಗಳನ್ನು ಹಿಂಪಡೆಯಲು ಸರ್ಕಾರ ಇಲ್ಲಿಯವರೆಗೆ ಕೈಗೊಂಡ ಕ್ರಮಗಳೇನು ಹಾಗೂ ವಿಳಂಬವಾಗುತ್ತಿರುವುದಕ್ಕೆ ಯಾವುದಾದರೂ ಅಧಿಕೃತ ಕಾರಣಗಳಿವೆಯಾ (ಮಾಹಿತಿ ಒದಗಿಸುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ ಕಗ್ಗಲೀಪುರ ಗ್ರಾಮದ ಸ.ನಂ.46 ರಲ್ಲಿ ವೇದ ವಿಜ್ಞಾನ ಮಹಾ ವಿದ್ಯಾ ಪೀಠಕ್ಕೆ ಸರ್ಕಾರದ ಆದೇಶ ಸಂ:ಆರ್‌ಎಲ್ 58 ಎಲ್‌ಜಿಬಿ 1982 ದಿನಾಂಕ:23-02-1985 ರಂತೆ ಗುತ್ತಿಗೆಗೆ ನೀಡಲಾಗಿರುತ್ತದೆ. ಸದರಿ ಗುತ್ತಿಗೆ ಅವಧಿಯು 2015ನೇ ಸಾಲಿನಲ್ಲಿ ಮುಕ್ತಾಯಗೊಂಡಿರುತ್ತದೆ. ಸದರಿ ಗುತ್ತಿಗೆಯನ್ನು ನವೀಕರಿಸುವಂತೆ ಕೋರಿ ಸಂಸ್ಥೆಯು ಮನವಿ ಸಲ್ಲಿಸಿದ್ದು ಈ ಬಗ್ಗೆ ಜಿಲ್ಲಾಧಿಕಾರಿಯವರಿಂದ ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ. ಪ್ರಸ್ತಾವನೆಗೆ ಸಂಬಂಧಿಸಿದಂತೆ ಕೆಲವೊಂದು ಅಂಶಗಳ ಕುರಿತು ಮಾಹಿತಿ / ಸ್ಪಷ್ಟೀಕರಣ ನೀಡುವಂತೆ ಪ್ರಸ್ತಾವನೆಯನ್ನು ಪ್ರಾದೇಶಿಕ ಆಯುಕ್ತರ ಮುಖಾಂತರ ಸಲ್ಲಿಸುವಂತೆ ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ನೀಡಲಾಗಿದೆ.<br><br>ಮುಂದುವರೆದು ಪ್ರಾದೇಶಿಕ ಆಯುಕ್ತರು ಪ್ರಶ್ನಿತ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ನೋಂದಣಿ ವಹಿವಾಟುಗಳನ್ನು ನಡೆಸದಂತೆ ತಡೆಹಿಡಿಯಲು ತಿಳಿಸಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರು ರವರಿಗೆ ದಿನಾಂಕ:30-07-2025ರಂದು ಪತ್ರ ಬರೆದಿರುತ್ತಾರೆ.<br><br>ಸರ್ಕಾರದ ಆದೇಶ ಸಂಖ್ಯೆ:ಆರ್‌ಎಲ್ 189 ಎಲ್‌ಜಿಬಿ 2002 ದಿ:23-07-2003 ಕೆಂಗೇರಿ ಹೋಬಳಿ, ಬಿ.ಎಂ.ಕಾವಲ್ ಗ್ರಾಮದ ಸ.ನಂ.135ರಲ್ಲಿ 19-20ಎ/ಗುಂ ಜಮೀನನ್ನು ಶೈಕ್ಷಣಿಕ ಉದ್ದೇಶಕ್ಕಾಗಿ ವೇದ ವಿಜ್ಞಾನ ಮಹಾಪೀಠ ಸಂಸ್ಥೆಗೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ಮಂಜೂರು ಮಾಡಲಾಗಿರುತ್ತದೆ. ಗುತ್ತಿಗೆಗೆ ಅವಧಿ ಮುಗಿದಿರುವುದಿಲ್ಲ. |
| ಆ) | ವೇದ ವಿಜ್ಞಾನ ಮಹಾಪೀಠ (Art of Living) ಸ್ಥಾಪಿತ ಪ್ರದೇಶದಲ್ಲಿ, ಪೀಠದವರಿಂದ ಅತಿಕ್ರಮಣ ಮಾಡಿರುವ | ವೇದ ವಿಜ್ಞಾನ ಮಹಾಪೀಠ (Art of living) ಸ್ಥಾಪಿತ ಪ್ರದೇಶದಲ್ಲಿ ಪೀಠದವರಿಂದ ಜಮೀನುಗಳ ಒತ್ತುವರಿಗೆ ಸಂಬಂಧಿಸಿದಂತೆ ಸರ್ವೆ ಕಾರ್ಯಕೈಗೊಂಡಿದ್ದು ದಾಖಲೆಗಳ ಪರಿಶೀಲನಾ ಹಂತದಲ್ಲಿ ಬಾಕಿ ಇರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಸರ್ಕಾರಿ ರಾಜಕಾಲುವೆಗಳ ತೆರವಿಗೆ ನ್ಯಾಯಾಲಯದ ಆದೇಶಗಳಿದ್ದರೂ ಸಹ, ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರದವರು ಸದರಿ ಜಾಗಗಳನ್ನು ತೆರವುಗೊಳಿಸುವಲ್ಲಿ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಮುಂದುವರೆದು, ಕಗ್ಗಲೀಪುರ ಗ್ರಾಮದ ಸ.ನಂ.160, 163/3 ಹಾಗೂ 164/20 ಹಾದು ಹೋಗುವ ರಾಜಕಾಲುವ ಒತ್ತುವರಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 15264/2023ರಂತೆ ಪ್ರಕರಣ ದಾಖಲಾಗಿ, ದಿನಾಂಕ: 09-09-2025ರಂತೆ ಆದೇಶವಾಗಿರುತ್ತದೆ. ಸದರಿ ಆದೇಶದಂತೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ67(2)ರಡಿ ಉಪವಿಭಾಗಾಧಿಕಾರಿಯವರ ನ್ಯಾಯಾಲಯದ ಸಂಖ್ಯೆ:ಎನ್.ಡಿ/(67)2ಬೆಂ.ದ/ಎನ್.ಸಿ.ಆರ್./ಸಿ.ಆರ್.2/2026ರಂತೆ ದಾಖಲಾಗಿದ್ದು, ವಿಚಾರಣಾ ಹಂತದಲ್ಲಿ ಇರುತ್ತದೆ. |

ಸಂಖ್ಯೆ: ಆರ್‌ಡಿ 13 ಎಲ್‌ಜಿಕ್ಯೂ 2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು